ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

**ವಿಷಯ:** ಜಲಾನಯನ ಅಭಿವೃದ್ಧಿ ಇಲಾಖೆಯ ವಿಶ್ವ ಬ್ಯಾಂಕ್ ನೆರವಿನ ಸುಜಲ-III ಯೋಜನೆಯಡಿ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮದ ವೆಚ್ಚ ಭರಿಸಲು ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಜಿಲ್ಲೆಗೆ 2018-19ನೇ ಸಾಲಿನಲ್ಲಿ ರೂ.30.86 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಕೃಇ/61/ಕೃಯೋಕಾ/2019, ದಿನಾಂಕ 13.05.2019, 06.08.2019 ಮತ್ತು 07.01.2020
2. ದಿನಾಂಕ: 07.11.2019 ರಂದು ನಡೆದ 14ನೇ ಪಿ.ಇ.ಸಿ. ಸಭೆಯ ನಡವಳಿಗಳು
3. ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಜಿಲ್ಲೆ ರವರ ಪತ್ರ ಸಂ: ಜಂಕೃನಿಯಾ/ತಾಂತ್ರಿಕ/ಸುಜಲ-3/ 2019-20 ದಿನಾಂಕ: 29.02.2020

**ಪೀಠಿಕೆ**:-

ಉಲ್ಲೇಖ(1)ರ ಸರ್ಕಾರದ ಆದೇಶಗಳಂತೆ ವಿಶ್ವಬ್ಯಾಂಕ್ ನೆರವಿನ KWDP-II (ಸುಜಲ-III) EAP ಯೋಜನೆಗೆ ಯೋಜನೆಯ ಲೆಕ್ಕ ಶೀರ್ಷಿಕೆ:2402-00-102-0-28 (ಯೋಜನೆ) ರಡಿ 2019-20ನೇ ಸಾಲಿನಲ್ಲಿ ರೂ.3925.78 ಲಕ್ಷಗಳ ಅನುದಾನವನ್ನು ಜಲಾನಯನ ಅಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಲಾಗಿರುತ್ತದೆ.

ಸುಜಲ-III ಯೋಜನೆಯಡಿ ಸಂಗ್ರಹಿಸಿದ ವೈಜ್ಞಾನಿಕ ದತ್ತಾಂಶ / ತಾಂತ್ರಿಕತೆ ಬಳಸಿಕೊಂಡು ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮವನ್ನು (Saturation of Watershed) ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ PMKSY ಬ್ಯಾಚ್-5ರಲ್ಲಿನ IWMP-10/13-14 (ಶೆಟ್ಟಿಗೇರ) ಉಪಜಲಾನಯನದಲ್ಲಿ ಅನುಷ್ಠಾನ ಮಾಡಲು ಯಾದಗಿರಿ ಜಿಲ್ಲೆಯಿಂದ ಸಲ್ಲಿಸಿದ, ರೂ.943.37 ಲಕ್ಷ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ 07.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ 14ನೇ Project Empowered Committee (PEC) ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ (ಉಲ್ಲೇಖ-3).

ಸುಜಲ-III ಯೋಜನೆಯಡಿ Saturation ಕಾರ್ಯಕ್ರಮ ಅನುಷ್ಠಾನಕ್ಕಾಗಿ ಯಾದಗಿರಿ ಜಿಲ್ಲೆಗೆ ಇದುವರೆಗೆ ರೂ.884.77 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಜಿಲ್ಲೆ ಇವರು ಉಲ್ಲೇಖ-3ರ ಪತ್ರದಲ್ಲಿ ಮುಕ್ತಾಯಗೊಂಡ ವಿವಿಧ ಕಾಮಗಾರಿಗಳ ವೆಚ್ಚ ಪಾವತಿಗೆ ರೂ.75.00 (ರೂ. ಎಪ್ಪತ್ತೈದು ಲಕ್ಷ ಮಾತ್ರ) ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸುಜಲ-III ಯೋಜನೆಯ ಲೆಕ್ಕ ಶೀರ್ಷಿಕೆ **2402-00-102-0-28** (ಯೋಜನೆ) ಉಪ ಲೆಕ್ಕ ಶೀರ್ಷಿಕೆ-ಪ್ರಧಾನ ಕಾಮಗಾರಿಗಳು (139)ರಡಿ 2019-20ನೇ ಸಾಲಿನಲ್ಲಿ ಪ್ರಸ್ತುತ ಲಭ್ಯವಿರುವ ರೂ.30.86 ಲಕ್ಷ (ರೂ. ಮೂವತ್ತು ಲಕ್ಷದ ಎಂಬತ್ತಾರು ಸಾವಿರ ಮಾತ್ರ) ಅನುದಾನವನ್ನು ಮಾತ್ರ ಮೇಲ್ಕಂಡಂತೆ ಅನುಮೋದಿತ ಯೋಜನಾ ವರದಿ ಅನ್ವಯ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ವೆಚ್ಚ ಭರಿಸಲು ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಜಿಲ್ಲೆ ಇವರಿಗೆ 2019-20ನೇ ಸಾಲಿನಲ್ಲಿ KWDP-II (ಸುಜಲ-III) ಯೋಜನೆಯಡಿ ಬಿಡುಗಡೆ ಮಾಡಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ **2402-00-102-0-28**(ಯೋಜನೆ) ಉಪ ಶೀರ್ಷಿಕೆ 139ರಡಿ ಭರಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ: ವಿ.ಬ್ಯಾಂಕ್:ಸುಜಲ-III: Saturation: ಯಾದಗಿರಿ:ಅ.ಬಿಡುಗಡೆ:ದಿನಾಂಕ:02.03.2020**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಇವರಿಗೆ ಸುಜಲ-III ಯೋಜನೆಯಡಿ ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ PMKSY ಬ್ಯಾಚ್-5ರಲ್ಲಿನ IWMP-10/13-14 (ಶೆಟ್ಟಿಗೇರ) ಉಪಜಲಾನಯನದಲ್ಲಿ ಅನುಮೋದಿತ ಪರಿಷ್ಕೃತ ಯೋಜನಾ ವರದಿ ಅನ್ವಯ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ವೆಚ್ಚ ಭರಿಸಲು KWDP-II (ಸುಜಲ-III) ಯೋಜನೆಯಡಿ 2019-20ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2402-00-102-0-28(ಯೋಜನೆ) ಉಪ ಶೀರ್ಷಿಕೆ 139ರಡಿ ರೂ.30.86 ಲಕ್ಷ (ರೂ.ಮೂವತ್ತು ಲಕ್ಷದ ಎಂಬತ್ತಾರು ಸಾವಿರ ಮಾತ್ರ) ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ ಜಿಲ್ಲೆ, ಇವರು ಬಿಡುಗಡೆ ಮಾಡಿದ ಅನುದಾನವನ್ನು ದಿನಾಂಕ: 31.12.2019 ರೊಳಗೆ ಪೂರ್ಣಗೊಳಿಸಿರುವ ಸಂಪೂರ್ಣ ಜಲಾನಯನ ಉಪಚಾರ ಕಾಮಗಾರಿಗಳ ವೆಚ್ಚ ಭರಿಸಲು ಬಳಸತಕ್ಕದ್ದು, ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮಗಳನ್ನು ನೀಡಲಾಗಿರುವ ಮಾರ್ಗಸೂಚಿಗಳ ಅನುಸಾರ ಅನುಷ್ಠಾನ ಮಾಡಿರತಕ್ಕದ್ದು ಹಾಗೂ ಇದಕ್ಕೆ ಸಂಬಂಧಪಟ್ಟ

Procurement ಕಾರ್ಯಗಳನ್ನು (ವಸ್ತು/ಸರಕುಗಳ ಖರೀದಿ, ಕಾಮಗಾರಿ ಗುತ್ತಿಗೆ ಇತ್ಯಾದಿ) ವಿಶ್ವಬ್ಯಾಂಕ್ Procurement ನಿಯಮಾವಳಿಗಳ ಪ್ರಕಾರ ನಿರ್ವಹಿಸಿರತಕ್ಕದ್ದು. ಇಲಾಖೆ ನಿಯಮಾವಳಿ ಪ್ರಕಾರ ವೆಚ್ಚ ಭರಿಸಿ ಲೆಕ್ಕ ಪತ್ರ ಸರ್ಕಾರ ನಿಗದಿಪಡಿಸಿದಂತೆ ಪಾರದರ್ಶಕವಾಗಿ ನಿರ್ವಹಿಸುವುದು ಮತ್ತು ಲೆಕ್ಕ ತಪಾಸಣೆ ಸಂದರ್ಭದಲ್ಲಿ ಹಾಜರುಪಡಿಸುವುದು. ನಿಗದಿತ ದಿನಾಂಕದೊಳಗೆ ಕೇಂದ್ರ ಕಛೇರಿಗೆ ಬಿಡುಗಡೆ ಮಾಡಲಾದ ಅನುದಾನಕ್ಕೆ 62ಬಿ ನಮೂನೆಯಲ್ಲಿ ವರದಿಯನ್ನು ಸಲ್ಲಿಸುವುದು ಮತ್ತು ತಮ್ಮ ಜಿಲ್ಲೆಯಲ್ಲಿನ FMTSC ಸಿಬ್ಬಂದಿಗೆ Statement of Expenditure (SoE) ಒದಗಿಸಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವುದು. ಕೈಗೊಂಡ ಚಟುವಟಿಕೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಅನುಮೋದಿತ ಕಾರ್ಯ ಚಟುವಟಿಕೆಗಳನ್ನು ಹೊರತುಪಡಿಸಿ ವೆಚ್ಚಮಾಡಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

ಯೋಜನಾ ನಿರ್ದೇಶಕರು,
ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಸುಜಲ-III) &
ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು

ಪ್ರತಿಗಳನ್ನು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಮುಖ್ಯಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ ಬೆಂಗಳೂರು, ಇವರಿಗೆ ಮುಂದಿನ ಕ್ರಮಕ್ಕಾಗಿ (ದ್ವಿಪ್ರತಿಗಳಲ್ಲಿ).
3. ಜಿಲ್ಲಾ ಖಜಾನಾದಿಕಾರಿಗಳು, ಜಿಲ್ಲಾ ಖಜಾನೆ ಯಾದಗಿರಿ.
4. ಉಪ ನಿರ್ದೇಶಕರು, Treasury Network Management Center, ಖನಿಜ ಭವನ ಬೆಂಗಳೂರು
5. ಜಂಟಿ ಕೃಷಿ ನಿರ್ದೇಶಕರು, ಯಾದಗಿರಿ, ಇವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ಜಿಲ್ಲಾ ನೋಡಲ್ ಅಧಿಕಾರಿಗಳು, ಯಾದಗಿರಿ ಜಿಲ್ಲೆ, ಕೇಂದ್ರ ಕಛೇರಿ ಜ.ಅ.ಇ
7. Team Leader FMTSC / FRC, ಬೆಂಗಳೂರು, ಇವರಿಗೆ ಮುಂದಿನ ಕ್ರಮಕ್ಕಾಗಿ.
8. ಆದೇಶದ ಕಡತಕ್ಕೆ.